ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-5, March - April 2026, Pp. 67-73
©*IIMRD*, Mysuru

IIMRD JOURNALS
www.iimrd.com

# ಶರಣ ಧರ್ಮ

**ಶಕುಂತಲ ಸಿ.ಎಸ್**
ಅತಿಥಿ ಉಪನ್ಯಾಸಕರು, ತತ್ತ್ವಶಾಸ್ತ್ರ ಅಧ್ಯಯನ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

**ಸಾರಾಂಶ: (Abstract)**

*ಮಾನವನ ಬದುಕು ನಿಸರ್ಗವು ನೀಡಿದ ಅಮೂಲ್ಯ ಕೊಡುಗೆ. ನಿಸರ್ಗವೇ ದೇವರು. ಪರಮಶಾಂತಿಯನ್ನು ಪಡೆಯುವುದಕ್ಕೆ ದೇವರು ಕರುಣಿಸಿದ ಸುವರ್ಣ ಅವಕಾಶ. ಈ ಜಗತ್ತು ವಿಶಾಲ, ವೈಭವ ಪೂರ್ಣವಾದುದು. ದೇವ ನಿರ್ಮಿತ ಈ ಭವ್ಯ–ದಿವ್ಯ ಜಗತ್ತನ್ನು ಅನುಭವಿಸಿದಾಗ ನಮ್ಮ ಬದುಕು ಸಾರ್ಥಕ ಎಂಬುದನ್ನು ನಾವೆಲ್ಲರೂ ಅರಿಯಬೇಕು. ಇಂದಿನ ತಾಂತ್ರಿಕ ಯುಗದಲ್ಲಿ ಧರ್ಮದ ನಡೆ, ದೇವರ ಬಗೆಗಿನ ಅರಿವು ಶೂನ್ಯ. ಮಾನವೀಯ ಮೌಲ್ಯಗಳು ಮೂಲೆ ಹಿಡಿದಿವೆ. ನಮ್ಮೆಲ್ಲರ ಸಾರ್ಥಕ ಬದುಕಿಗೆ ಧರ್ಮದ ನಡೆ. ಧರ್ಮದ ಪ್ರಜ್ಞೆ ಅಮೂಲ್ಯವಾದ ಜೀವನ ಸಾರ್ಥಕಗೊಳ್ಳಬೇಕಾದರೆ ಮನುಷ್ಯನಿಗೆ ಧರ್ಮದ ತಿಳುವಳಿಕೆ. ಅಜ್ಞಾನದಿಂದ ಸುಜ್ಞಾನದೆಡೆಗೆ ಮುನ್ನೆಡೆಸುವುದು ಧರ್ಮ. ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವುದು ಧರ್ಮ. ಧರ್ಮ, ಭಕ್ತಿ. ಸಂಸ್ಕೃತಿ ಮತ್ತು ಆದರ್ಶ ಮೌಲ್ಯಗಳಿಲ್ಲದೇ ಇದ್ದರೆ ಬಾಳು – ಬದುಕು ನಿರರ್ಥಕ. ಬೆಳಕಿನೆಡೆಗೆ ಹೆಜ್ಜೆ ಹಾಕುವುದೇ ನಿಜವಾದ ಈ ಧರ್ಮ.*

**ಮುಖ್ಯಪದಗಳು (Keywords):** *ಅರಿವು, ಕಾಯಕ. ಭಕ್ತಿ, ಧರ್ಮ, ಶರಣ ಧರ್ಮ.*

**ಪೀಠಿಕೆ**

ಧರ್ಮವೆಂಬುದು ಜೀವನ ವಿಧಾನ. ಒಳಿತು–ಕೆಡಕುಗಳ ಮಧ್ಯ ಬಾಳುವಾಗ ಒಳಿತಿನ ಬೆನ್ನು ಹತ್ತುವುದು, ಅದನ್ನು ಪರಿಪಾಲಿಸುವುದೇ ಧರ್ಮವಾಗಿದೆ. ಇಂತಹ ಧರ್ಮದ ನಡೆಯಿಂದ, ಪಾಲನೆಯಿಂದ ಜೀವನ ಸಾರ್ಥಕ. ಧರ್ಮವೆಂದರೆ ಉತ್ಕೃಷ್ಟ ಆಚರಣೆ. ಶರಣರು ಹೇಳಿದಂತೆ ನಡೆ ಮತ್ತು ನುಡಿಯೊಮದಿಗೆ ಸದಾ ಕಾಲವೂ ಸತ್ಯ ಶುದ್ಧ ಕಾಯಕದಲ್ಲಿರುವುದು. ಅದಕ್ಕೆ ಒಂದು ನೀತಿ ಸಂಹಿತೆಯ ಕಡಿವಾಣ ಇರುವುದು. ಜೀವನದಲ್ಲಿ ಮಹತ್ವಾಕಾಂಕ್ಷೆಯಿದ್ದರೆ ಅಸಾಧ್ಯವಾದುದನ್ನು ಸಾಧಿಸಲು ಸಾಧ್ಯವಾಗುತ್ತದೆ. ಆಚಾರ–ವಿಚಾರ ಸಂಪನ್ನರಾಗಿರುವುದು, ತಾನು ಎಲ್ಲರಿಗಾಗಿ ಅನ್ನುವುದೇ ನಿಜವಾದ ಧರ್ಮ. ಪರೋಪಕಾರವೇ ಬದುಕಿನ ಮರ್ಮ.

ವಿಶ್ವವಿಶಾಲದಲ್ಲಿ ಮಾನವನ ಬದುಕು ಸಹ್ಯವಾಗಬೇಕಾದರೆ ಶರಣ ಸಂಸ್ಕೃತಿ ಮತ್ತು ಅವರ ಸಾಹಿತ್ಯದಿಂದ ಎಂಬುದು ನಾವು ಕಂಡುಕೊಂಡ ಸತ್ಯ. ಪ್ರತಿಯೊಬ್ಬರಲ್ಲಿಯೂ ಇವನಾರವ ಎಂದೆನ್ನದೇ ಇವ ನಮ್ಮವನೆಂಬ ಗೌರವ ಭಾವವನ್ನು ತೋರಿ ಅಹಂಕಾರ ರಹಿತ ಬದುಕನ್ನು ರೂಢಿಸಿಕೊಳ್ಳುವುದೇ ಧರ್ಮದ ಕ್ರಮಬದ್ಧ ಬದುಕು. ಶರಣರ ಅಭಿಪ್ರಾಯದಲ್ಲಿ ಪ್ರತಿಯೊಬ್ಬ ಭಾರತೀಯನಲ್ಲಿ ನಡೆಯುವ ದಾರಿ

*Please cite this article as:* ಶಕುಂತಲ, ಸಿ.ಎಸ್. (2026). ಶರಣ ಧರ್ಮ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(5). ಪು.ಸಂ.* 67–73

ವಿಶ್ವವಿಶಾಲವಾಗಿರಬೇಕು, ಪ್ರತಿಯೊಬ್ಬನೂ ಸತ್ಸಂಗದಲ್ಲಿ ಮಾನವ ಧರ್ಮದ ಮೌಲ್ಯಗಳನ್ನು ಅರಿತು ಆಚರಿಸಿದ್ದೇ ಆದರೆ ಬದುಕು ಸಹ್ಯವಾಗುತ್ತದೆ. ಶರಣರ ಬದುಕು ನಮ್ಮದಾಗಬಾರದೇಕೆ? ನಮ್ಮಿಂದ ಆಚರಿಸಲು ಸಾಧ್ಯವಿಲ್ಲವೆ? ನಮ್ಮಷ್ಟಕ್ಕೆ ನಾವೇ ಆತ್ಮಗತ ಮಾಡಿಕೊಳ್ಳಬೇಕು. ಎಳೆಯ ಮಗುವಿನಂಥ ಬದುಕು ನಮ್ಮದಾಗಬೇಕು. ಎಳೆಯ ಮಗುವಿನ ಹೃದಯ ಅದೆಷ್ಟು ಸ್ವಚ್ಚ ಸುಂದರ? ಅದಕ್ಕೆ ಬಟ್ಟೆಯ ಜೋಳಿಗೆಯೂ ಒಂದೇ, ಬಂಗಾರದ ತೊಟ್ಟಿಲು ಒಂದೇ ಎಂದು ಭ್ರಮಿಸಿ ಸುಖವಾಗಿ ನಿದ್ರಿಸುತ್ತದೆ. ಭೇದ–ಭಾವವನ್ನು ಅರಿಯದ ಆ ಮಗುವಿನ ನಿದ್ರೆಗೆ ಆನಂದಕ್ಕೆ ಕೊರತೆಯೆಂಬುದಿಲ್ಲ. ಆ ಮಗುವಿನ ಜೀವನ ನಮಗೆ ಆದರ್ಶ ಮತ್ತು ಅನುಕರಣೀಯ. ಮನುಷ್ಯನು ಅಂತಹ ಮುಗ್ದ ಮಗುವಿನ ತರ ಬದುಕುವುದನ್ನು ಕಲಿಯಬೇಕು. ಆತ್ಮಾನಂದ ಸುಖವು ಪ್ರವಾಹದಂತೆ ನಿರಂತರ ಇರುವಂತಹದ್ದು, ಪ್ರಾಪಂಚಿಕ ಸುಖವು ಉರಿಯುವ ಬೆಂಕಿಯಿದ್ದಂತೆ. ಕ್ಷಣಕಾಲ ಬೆಂಕಿಯು ಧಗಧಗಿಸಿ ಉರಿದು ಮರೆಯಾಗುವಂತೆಯೇ ಸಂಸಾರ ಸುಖವೆಂದು ಬಗೆದವರು. ಆದರೆ ಪಾರಮಾರ್ಥಿಕ ಸುಖವು ನಿರಂತರ ಬೆಳಗುವ ಎಣ್ಣೆಯ ದೀಪದಂತೆ. ಶೀತಲ ಚಂದಿರನ ಬೆಳದಿಂಗಳದಂತೆಯೆಂದು ತಿಳಿದುಕೊಂಡವರು. ಶರಣರು ಶಾಶ್ವತ ಸುಖದ ಪ್ರಾಪ್ತಿಗಾಗಿ ಧರ್ಮ ಮಾರ್ಗವಿಡಿದು ತೊಳಲದೆ–ಬಳಲದೆ ಆಚರಿಸಿ ಪರಿಶುದ್ದ ಬದುಕು ಸಾಗಿಸಿದವರು. ನಿಷ್ಠೆ, ಸತ್ಯ, ಶುದ್ದ ಕಾಯಕ ಮಾಡುತ್ತ ಸನ್ಮಾರ್ಗದಲ್ಲಿ ನಡೆಯುವರಿಗೆ ಯಾವುದರ ಹಂಗಿಲ್ಲ. ದಿಟ್ಟತನದ ಹೆಜ್ಜೆಯನ್ನಿಟ್ಟು ನಡೆವ ಶರಣರು–ಸಂತರ ಧರ್ಮ ಮಾರ್ಗದಲ್ಲಿ ನಡೆದು ಭವ್ಯ ಭಾರತದ ಶಿಲ್ಪಿಗಳಾಗಲು ಪಣತೊಟ್ಟು ಪ್ರಯತ್ನ ಮಾಡೋಣ. ಪ್ರತಿಯೊಬ್ಬ ಭಾರತೀಯನ ಘೋಷಣೆ ಸಕಲರಿಗೂ ಲೇಸಾಗಲಿ. ಭಾವುಕ ಜಗತ್ತಿಗೆ ಸಮಾಜವನ್ನು ಕರೆದೊಯ್ಯುವ ನಿಷ್ಪ್ರಯೋಜಕ ಪರಿಕಲ್ಪನೆಗಿಂತಲೂ ವಾಸ್ತವ ಬದುಕಿಗೆ ಸಮಾಜವನ್ನು ನಿಲ್ಲಿಸುವ ಉಪಯುಕ್ತ ಯೋಚನೆ–ಯೋಜನೆಗಳು ಪ್ರಸ್ತುತ ಅಗತ್ಯವಾಗಿವೆ.

ಧರ್ಮ ಅವನತಿಯ ಹಾದಿಯಲ್ಲಿ ಸಾಗಿದಾಗ, ಅದರ ಪುನರುತ್ಥಾನಕ್ಕಾಗಿ ಐತಿಹಾಸಿಕ ಅವಶ್ಯಕತೆಯೆನ್ನುವಂತೆ ಮಾಹಾಪುರುಷರು ಜನಿಸುತ್ತಾರೆಂಬುದು ಸುಳ್ಳಲ್ಲ. 12ನೇ ಶತಮಾನದಲ್ಲಿ ಧರ್ಮ ಶೋಚನೀಯ ಸ್ಥಿತಿಯಲ್ಲಿದ್ದಾಗ ಶರಣರು ಧರೆಗಿಳಿದು ಬರುತ್ತಾರೆ. ಪರಿಸ್ಥಿತಿಗಳ ಕೂಸಾದರೂ ಅವನ್ನು ಮೀರಿ ಗಗನದೆತ್ತರಕ್ಕೆ ಬೆಳೆದು ನಿಲ್ಲುತ್ತಾರೆ, ಪೂರ್ವರಂಗ ಮೊದಲೇ ಸಿದ್ದವಾಗಿತ್ತೆಂಬಂತೆ ಶರಣರು ಜನಿಸಿ, ಅಧೋಗಾಮಿಯಾಗಿದ್ದ ಧರ್ಮವನ್ನು ಮೇಲೆತ್ತಲು ಪ್ರಯತ್ನಿಸಿದ್ದಾರೆ. ಅಜ್ಞಾನಾಂಧಕಾರದಲ್ಲಿ ಮುಳುಗಿದ್ದ ಸಾಮಾನ್ಯ ಜನತೆಗೆ ಅವರ ಸಂದೇಶ, ತಾವು ಹುಟ್ಟಿ ಬೆಳೆದ ಪೋಷಿಸಿದ ಅನೇಕ ಆಸೆಗಳನ್ನು ಹುಟ್ಟಿಸಿದ ಸಮಾಜದಲ್ಲಿಯೇ ಧರ್ಮವನ್ನು ಎತ್ತಿ ಹಿಡಿದರು. ಅವರ ಆತ್ಮಜ್ಯೋತಿ ನಂದದೆ, ಮಂಕಾಗದೆ ಇರಲಿಲ್ಲ. ದೇಹಕ್ಕೆ ಸಾವುಂಟು. ಉಸಿರಿಗೆ ಸಾವಿಲ್ಲ. ವಚನಗಳೇ ಶರಣರ ಉಸಿರು.

ಯುಗಶಕ್ತಿ ಕನ್ನಡಿಗರ ಭಾರತೀಯರ ನಾಡಿನಾಡಿಗಳಲ್ಲಿ ಧರ್ಮವು ಪ್ರವಹಿಸುವುದಾದರೆ ಆ ಆಸೆ ಈಡೇರಿಸುವ ಕಾಲ ಬಹುಬೇಗ ಬರಲೆಂದು ಆ ಮಹಾಪುರುಷನನ್ನೇ ಪ್ರಾರ್ಥಿಸಬೇಕಾಗಿದೆ. ಸಾರ್ಥಕತೆಯ ಬದುಕು ಕಟ್ಟಿಕೊಳ್ಳದ ಬದುಕು ಎಲ್ಲಿದ್ದರೂ ಸತ್ತಂತೆ. 12ನೇ ಶತಮಾನದ ಧರ್ಮದ ನುಡಿಮುತ್ತುಗಳೂ ಇಂದಿಗೂ ಜೀವಂತವಿದೆ. ಇದಕ್ಕೆ ಕಾರಣ ಶರಣರು ಕಟ್ಟಿಕೊಂಡಿದ್ದ ಸಾರ್ಥಕ ಬದುಕು. ಅವರು ಧರ್ಮಕ್ಕಾಗಿ ಕಟ್ಟಿಕೊಂಡ ಮೌಲಿಕ ಬದುಕು. ಶರಣ ಧರ್ಮದ ಮೂಲ ತತ್ವ ಅರ್ಪಿತವಾಗುವುದು. ವ್ಯಕ್ತಿ ಮೊದಲು

ತನ್ನನ್ನು ಗುರುವಿಗೆ, ಲಿಂಗಕ್ಕೆ, ತದನಂತರ ತನು, ಮನ, ಧನವನ್ನು ಸಮಾಜದ ಧರ್ಮಕ್ಕೆ ಅರ್ಪಿಸಿಕೊಳ್ಳಬೇಕು. "ಅರ್ಪಿತವಿಲ್ಲದೆ ಪ್ರಸಾದವಿಲ್ಲ. ವ್ಯಕ್ತಿ ಪ್ರಸಾದವಾಗಬೇಕಾದರೆ ದೇವನ ಧರ್ಮದ ಸಾಮರಸ್ಯವನ್ನು ಪಡೆದು ಸಮಾಜ ಮುಖಿಯಾಗಿ ಮರಳುವುದು. ವಿಶ್ವದ ಎಲ್ಲಾ ಧರ್ಮಗಳಲ್ಲಿ ಒಂದೇ ಸಾಮರಸ್ಯವಿದೆ. ಅದು ಜೀವ+ದೇವ ಸಾಮರಸ್ಯ. ವಿಶ್ವದ ಎಲ್ಲ ಧರ್ಮದ ಸಾಧನೆಯು ಆ ದೇವನಲ್ಲಿ ಕೂಡುವುದು. ದೇವೀ ಸಾಮರಸ್ಯವನ್ನು ಪಡೆದ ವ್ಯಕ್ತಿ ದೇವಮಾನವನಾಗುತ್ತಾನೆ. ಶರಣ ಧರ್ಮದಲ್ಲಿ ಅರ್ಪಣೆಗೆ ಬಹಳ ಮಹತ್ವವಿದೆ. ಬಸವ ಧರ್ಮಕ್ಕೆ ದಾಸೋಹ (ಅರ್ಪಿಸುವುದು) ಮತ್ತು ಕಾಯಕ (ಪರಿಶುದ್ದ ದುಡಿಮೆ) ಎರಡು ಕಣ್ಣುಗಳಿದ್ದಂತೆ.

ಬಸವ ಧರ್ಮದಲ್ಲಿ ದಾಸೋಹವನ್ನು 3 ತೆರೆನಾಗಿ ಮಾಡಿದ್ದಾರೆ.. 1.ಸ್ವಶ್ರಮದಿಂದ ಸದ್ಬಳಿಕೆ ಮಾಡಿ ಉಳಿದಿದ್ದನ್ನು ಜಂಗಮ ದಾಸೋಹ ಅಂದರೆ ದಾಸೋಹ ಧರ್ಮಕ್ಕೆ ಅರ್ಪಿಸುವುದು. ಕಾಯಕದಿಂದ ಬರುವ ಅನುಭಾವವೇ ಅರಿವಿಗೆ ಮೂಲ, ಅರಿತವ ಶರಣ, ಆದುದರಿಂದ ಇದು ಶರಣಧರ್ಮ. ವಿಶ್ವವು ದೇವರು ಕೊಟ್ಟ ಕೊಡುಗೆ. ವಿಶ್ವದಲ್ಲಿ ಬೆಳೆದದ್ದೆಲ್ಲ ದೇವರು ಕೊಟ್ಟ ಪ್ರಸಾದ. ಈ ವಿಶ್ವದ ಜೀವಜಾಲದಲ್ಲಿದೆ ಚರಾಚರವೆಲ್ಲ. ಈ ಚರಾಚರಗಳ ರಕ್ಷಣೆಯೇ ಮಾನವಧರ್ಮ. ಈ ಧರ್ಮದಲ್ಲಿ ಒಬ್ಬನೇ ದೇವರು, ಒಂದೇ ಜಗತ್ತು, ಒಂದೇ ಜನಾಂಗ ಇದುವೇ ಶರಣಧರ್ಮ. ಇಲ್ಲಿ ಗಿಡ ಮರ ತರು ಲತೆ ಆದಿಯಾಗಿ ಎಲ್ಲ ಜೀವಿಗಳು ಪೂರಕವಾಗಿ ಬದುಕಬೇಕು. ಈ ಬದುಕುವ ದಾರಿಯೇ ಕಂಡುಕೊಳ್ಳುವುದು, ಗಿಡ ಮರಗಳು ಪ್ರಾಣಿ ಪಕ್ಷಿ ಮಾನವರಿಗೆ ಆಹಾರ ಒದಗಿಸುತ್ತವೆ. ಪರಿಸರವನ್ನು ಶುದ್ಧಿಗೊಳಿಸುತ್ತವೆ, ಮಳೆ ಕರೆಸುತ್ತವೆ, ನೀರು ಜೀವ ಜಲವಾಗುತ್ತದೆ. ಗಾಳಿ ಉಸಿರಾಗಿ ನೆಲ ಹಸಿರಾಗುತ್ತದೆ. ಜಗದ ಚೇಷ್ಟೆಗೆ ರವಿಯು ಬೀಜವಾಗುತ್ತಾನೆ. ಈ ಕ್ರಿಯೆಯೇ ದಾಸೋಹ. ದಾಸೋಹದಿಂದ ಚತುರ್ವಿಧಗಳು ಸಂಪನ್ನವಾಗುತ್ತವೆ. ಪ್ರವಿಧ ದಾಸೋಹದ ಜೊತೆಯಲ್ಲಿ ವಿಶ್ವವೇ ಮನೆ ಎಂಬ ಪರಿಕಲ್ಪನೆ ಶರಣರದ್ದು, ಬ್ರಹ್ಮಾಂಡಕ್ಕೂ ಪಿಂಡಾಂಡಕ್ಕೂ ಇರುವ ಸಂಬಂಧವನ್ನು ಗಟ್ಟಿಗೊಳಿಸುವ ಭಾವವಿದು. "ಜಗವು ನಿನ್ನೊಳಗೆ ನೀನು ನನ್ನೊಳಗೆ" ಈ ಸತ್ಯವೇ ಬಸವಧರ್ಮದ ತಿರುಳು. ಇಲ್ಲಿ ಸ್ಥಾವರ (ಶಿವ) ಜಂಗಮ (ಸಮಾಜ)ಒಂದೇ.

2.ಯೋಗ: ಶರಣ ಧರ್ಮದಲ್ಲಿ ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ. ಇಲ್ಲಿ ಸಲ್ಲಬೇಕಾದರೆ ಕಾಯಕ, ಪ್ರಸಾದ, ದಾಸೋಹದ ಮೂಲಕ ಜಂಗಮಕ್ಕೆ ತಲುಪಬೇಕು. ಇದಕ್ಕೆ ಜಂಗಮ ಯೋಗ. ಈ ಯೋಗ ಲೋಕೋದ್ಧಾರಕ್ಕೆ ದಾರಿ, ಇಷ್ಟಲಿಂಗ ಯೋಗವು ವ್ಯಕ್ತಿಯನ್ನು ಆತ್ಮಕಲ್ಯಾಣದತ್ತ ಕರೆದೊಯ್ದರೆ, ದಾಸೋಹ ಯೋಗವು ಸಮಾಜಕಲ್ಯಾಣದತ್ತ ಕರೆದೊಯ್ಯುತ್ತದೆ, ವ್ಯಕ್ತಿ ಹಾಗೂ ಸಮಾಜದ ಸಮ ಸಮ ಉದ್ಧಾರವೇ ಈ ಧರ್ಮದ ಗುರಿ. ಉದಾರ ಮನೋಭಾವ ಉಳ್ಳವರಿಗೆ ಈ ವಿಶ್ವವೇ ಒಂದು ಕುಟುಂಬ, ಈ ವಿಶ್ವದಲ್ಲಿ ವ್ಯಕ್ತಿ ತನ್ನನ್ನು ತನ್ನಲ್ಲಿ ವಿಶ್ವವನ್ನು ಕಾಣುತ್ತಾನೆ, ಆತ ಜಾತಿ ಮತ ಪಂಥ ಪಂಗಡ ಎಲ್ಲವನ್ನು ಮೀರಿರುತ್ತಾನೆ, ಉದಾರ ಚರಿತೆಯುಳ್ಳವನಾಗಿರುತ್ತಾನೆ. ಈ ನುಡಿಮುತ್ತನ್ನು ಶರಣಧರ್ಮ ಸಾರುತ್ತದೆ, ಅನನ್ಯತೆಯಲ್ಲಿ ಏಕತೆಯನ್ನು ಸಾರುವ ಪರಿಯಿದೆ. ಈ ವಸುಧೈವ ಕುಟುಂಬಕಮ್ ಪರಿಕಲ್ಪನೆ ಶರಣರ ಕಲ್ಪನೆ. ಮನುಷ್ಯ ತನ್ನ ಇರುವಿಕೆಯಲ್ಲಿಯೇ ಹೃದಯ ವೈಶಾಲ್ಯತೆಯನ್ನು ಉಂಡು ದೈವ ಸಮ್ಮತವಾಗುವ ಪರಿಯಿದೆ. ಇಲ್ಲಿ ಆರ್ಥಿಕ, ಸಾಮಾಜಿಕ, ಧಾರ್ಮಿಕ ಸಮಾನತೆಯ ಜೊತೆಯಲ್ಲಿ ವಿಶ್ವಕ್ಕೆ ಒಬ್ಬನೇ ದೇವರು

ಎಂಬ ಭಾವ ಅಡಕವಾಗಿದೆ, ಇಲ್ಲಿಯ ಎಲ್ಲ ಸಂಪತ್ತು ಸೊತ್ತು ಎಲ್ಲರ ಸೊತ್ತು, ಅಲ್ಲಿಯ ಜಂಗಮ, ಸ್ಥಿರ ಆಸ್ತಿಯು ಎಲ್ಲರಿಗೆ ಒಳಪಟ್ಟದ್ದು, ವಿಶ್ವದಲ್ಲಿಯ ಗಾಳಿ, ಬೆಳಕು, ನೆಲ, ಜಲ ದೇವಸಂಪತ್ತಾದುದರಿಂದ ಅದರ ಮೇಲೆ ಎಲ್ಲ ಜೀವ ಜಂತುಗಳ ಹಕ್ಕು ಇದೆ, ಇದನ್ನರಿಯುವುದೇ ಸಮಾನತೆಯ ಧರ್ಮ, ಅರಿದು ಆಚರಿಸುವುದೇ ಶರಣಧರ್ಮ. ಶರಣ ಧರ್ಮದಲ್ಲಿ ಕರ್ಮ(ಕಾಯಕ)ವಿದೆ. ಧರ್ಮವೆಂದರೆ ದಿನಿತ್ಯದ ನಡೆ, ಆಚರಣೆಗಳು, ಕರ್ಮವೆಂದರೆ ಜೀವನಕ್ಕೆ ಬೇಕಾಗುವ ಉಪಯುಕ್ತವಾಗುವ ಕಾಯಕಗಳು, ಈ ಧರ್ಮ ಕರ್ಮಗಳ ಸಂಯೋಗವೇ ಸತ್ ಸಂಯೋಗವೇ ಈ ಧರ್ಮದ ನೆಲೆಗಟ್ಟು. ಭಾವಲಿಂಗ ಪ್ರಸಾದ ಇಲ್ಲಿ ಪದಾರ್ಥ ಪ್ರಸಾದವಲ್ಲ. ಭಾವಲಿಂಗಕ್ಕೆ ಅರ್ಪಿಸುವ ಪದಾರ್ಥವೇ ಆತ್ಮ. ಪ್ರಸಾದವೇ ಪರವಸ್ತು. ಪ್ರಸನ್ನಭಾವವಾದುದೆ ಪ್ರಸಾದವ ಪಡೆದುದು. ಈ ಸ್ಥಿತಿಯಲ್ಲಿ ಇಷ್ಟಲಿಂಗ, ಪ್ರಾಣಲಿಂಗ ಮರೆಯಾಗಿ ನಿರವಲಯವಾಗುತ್ತದೆ. "ಬಯಲು ಬಯಲನೆ" ಎಂಬ ಬಯಲಿನಲ್ಲಿ ಒಂದಾಗುತ್ತದೆ. ಘಟದ ಬಯಲು ಹೊರಗಿನ ಬಯಲಿನಲ್ಲಿ ಲೀನವಾಗುವಂತೆ, ಆಗ ಪೂಜೆಯಿಲ್ಲಾ, ಪುನಸ್ಕಾರವಿಲ್ಲ, ಮುಟ್ಟಲಿಲ್ಲ, ಮುಟ್ಟಿ ಪೂಜಿಸಲಾರದ ಸ್ಥಿತಿ ಅದು. ಇಲ್ಲಿ ಪರಿಪೂರ್ಣತೆಯ ಲಿಂಗ, ಪ್ರಸನ್ನತೆಯ ಪೂಜೆ, ಜ್ಞಾನವೇ ಪ್ರಸಾದ. ವ್ಯಕ್ತಿ ದುಡಿಯುತ್ತಾನೆ. ಪ್ರಾಮಾಣಿಕವಾಗಿ ದುಡಿಯುತ್ತಾನೆ. ಅದು ಕಾಯಕ, ಪಡೆಯುತ್ತಾನೆ ಅದು ದೇವ ಕೃಪೆಯೆಂದು ನಂಬುತ್ತಾನೆ. ಸಕಲವು ಶಿವಸೊತ್ತು ಎಂಬ ಭಾವ ಒಲಿಸಿಕೊಳ್ಳುತ್ತಾನೆ. ಅದು ಪ್ರಸಾದ, ತಾನು ಬದುಕಬೇಕು. ಸಕಲ ಜೀವಿಗಳು ಬದುಕಬೇಕು ಎಂಬ ಭಾವ ಒಡಮೂಡಿದಾಗ ತಾನು ಉಳಿಸಿದ್ದನ್ನು ಸಮಾಜಕ್ಕೂ ಶಿವ ಸೊಮ್ಮಿಗು ನೀಡುತ್ತಾನೆ. ಅದು ದಾಸೋಹ, ಇವು ಮೂರು ಧರ್ಮದ ಮುಖ್ಯ ಅಂಗಗಳು.

ಬಸವಣ್ಣನ ಎರಡೂ ವಚನಗಳು ನಾವು, ನಮ್ಮ ಪೂರ್ವಜರು ಕಟ್ಟಿಕೊಂಡ ಹಲವು ಗೋಡೆಗಳನ್ನು ಸೂಚಿಸುತ್ತವೆ. ಕುವೆಂಪು ಹೇಳುವಂತೆ "ನಾವೆಲ್ಲರೂ ಹುಟ್ಟಿದಾಗ ವಿಶ್ವ ಮಾನವರು. ಹೆಸರಿಟ್ಟಾಕ್ಷಣ ಯಾವುದೋ ಜಾತಿ, ಧರ್ಮ, ಭಾಷೆ, ಸಸಂಪ್ರದಾಯ ಕಟ್ಟುಕಟ್ಟಳೆಯ ಸೀಮಿತತ್ವಕ್ಕೆ ಸಮಾಜ, ತಂದೆ–ತಾಯಿಗಳು ಒಳಪಡಿಸುತ್ತಾರೆ. ಆಗ ನಾನು ವಿಶ್ವಮಾನವನಿಂದ ಅಲ್ಪಮಾನವನನಾಗುತ್ತೇನೆ, ಆಕಾಶದ ಅಗಲ ಅಳಿದು ಮೈಕ್ರೋಸ್ಕೋಪಿನಲ್ಲಿ ನೋಡುವಂತಹ ಕಿರುಬಿಂದುವಾಗುತ್ತೇನೆ. ಅರಿವು, ಶಿಕ್ಷಣ, ಜ್ಞಾನದ ಉದ್ದೇಶವೆಂದರೆ ನಾವು ಪುನಃ ಈ ಗೋಡೆಗಳನ್ನೆಲ್ಲಾ ನಿರ್ನಾಮ ಮಾಡಿ ನಿಸ್ಸೀಮನಾಗಬೇಕು". ತನು, ಮನ,ಧನ ನನ್ನವಲ್ಲ, ಇಡೀ ಜೀವಸಂಕುಲಕ್ಕೆ ಸೇರಿದವೆಂಬ ಸದ್ಭಾವನೆ ಬೆಳೆಸಿಕೊಳ್ಳುತ್ತಾ ಸತ್ ಚಿಂತನೆ ಸತ್ಕಾರ್ಯಗಳ ಮೂಲಕ ಉದಾರ, ವಿಶಾಲ, ಶಾಶ್ವತ, ನಿಸ್ಸೀಮ ಮೌಲ್ಯಗಳ ಬದುಕು ನಮ್ಮದಾಗಿಸಿಕೊಂಡು, ಉದಾರ ಚರಿತಾನಾಂತು ವಸುದೈವ ಕುಟುಬಕಂ ಎನ್ನುವಂತೆ ವಿಶ್ವಬಂಧುವಾಗಬೇಕು, ಅದೇ "ನಿಸ್ಸೀಮತ್ವ" ನಾವೆಲ್ಲ ಈಗ ಸೀಮೆಯಲ್ಲಿ ಬದುಕುತ್ತಾ ಇದ್ದೇವೆ. ಅರಿದು ನಿಸ್ಸೀಮ, ನಿಜೈಕ್ಯ. ಲಿಂಗೈಕ್ಯ ಆಗೋಣ, ವಿಶ್ವ ವಿಶಾಲವಾಗೋಣ. 12ನೇ ಶತಮಾನದಲ್ಲಿ ವೈದಿಕತ್ವ ನಿರಾಕರಿಸುವ ಚಿಂತನೆ ಹರಿಯಬಿಟ್ಟರು, ಅದು ಸನ್ಮಾರ್ಗದ, ಸತ್ಕಾರ್ಯಗಳ ಮೂಲಕ ರಚನಾತ್ಮಕವಾಗಿ ಗಟ್ಟಿಗೊಂಡು ಎಲ್ಲಾ ಭೇದಗಳ ಮಾರ್ಪಡಿಸಿ ನದಿಯಲ್ಲಿ ನದಿ–ಒಂದಾದಂತೆ, ಆ ನದಿಗಳೆಲ್ಲಾ ಸಮುದ್ರಕ್ಕೆ ಸೇರುವಂತೆ ಜಗದಗಲ,ಮುಗಿಲಗಲ, ಮಿಗೆಯಗಲ, ನಿಮ್ಮಗಲ, ಪಾತಾಳದಿಂತತ್ತೆಂದು ಪವಾಡ ಸ್ವರೂಪದಲ್ಲಿ ಐತಿಹಾಸಿಕವಾಗಿ ಘಟಿಸಿ, ಎಲ್ಲಾ

ಎಡರು–ತೊಡರು, ಭೇದ ಭಾವ, ಸೀಮೆ, ಬೇಲಿ, ಸಂಕುಚಿತತೆ ಸುಟ್ಟು ಆಧ್ಯಾತ್ಮಿಕವಾಗಿ ಕಾಯಕ–ದಾಸೋಹಗಳ ಮೂಲಕ ಸಮಸಮಾಜ, ಮನುಜಮತ ವಿಶ್ವಪಥ ಸರ್ವೋದಯ, ಸಮನ್ವಯ ಸಾಧಿಸಿದರು.

12ನೇ ಶತಮಾನದ ಶರಣರು ಹಳೆ ಕೊಳೆತ ನಿರುಪಯೋಗಿ ವೈದಿಕ ಧರ್ಮವನ್ನು ಹಳೆ ಅಂಗಿ ಬಿಸಾಡುವಂತೆ ಬಿಸಾಡಿ ನಿಸ್ಸೀಮ ತತ್ವದ ಹೊಸ ಧರ್ಮ ಸ್ಥಾಪಿಸಿದರು. ಅದನ್ನು "ಲಿಂಗಾಯತ ಧರ್ಮ", "ವಚನ ಧರ್ಮ" ಶರಣಧರ್ಮ", ಕಾಯಕ–ದಾಸೋಹ ಧರ್ಮ, ಬಸವಧರ್ಮ ಎಂದೂ ಕರೆಯಬಹುದು. ಇದಕ್ಕೆ ನಡೆ–ನುಡಿ ಭದ್ರ ಬುನಾದಿಯಾದರೆ ಜೀವ ಸಂಕುಲವೆಲ್ಲ ಒಂದೆಂಬ, ಚರಾಚರವೆಲ್ಲ ಪರಸ್ಪರ ಅವಲಂಬಿತವೆಂಬ ಭಾವನೆಯಲ್ಲಿ ಪರಸ್ಪರರ ಬಾಳ್ವೆಗೆ ಸಹಕಾರಿ. ಆಚಾರವೇ ನಿಸ್ಸೀಮತೆಗೆ ಸ್ವರ್ಗ, ಅನಾಚಾರವೇ ನರಕ. ಹಿರಿತನವಾವುದೆಂದಡೆ ಗುಣಜ್ಞಾನ, ಆಚಾರಧರ್ಮ ಕೂಡಲಸಂಗನ ಶರಣರು ಸಾಧಿಸಿದ ಹಿರಿಯತನ ಶರಣರು ತ್ರಿವಿಧ ಆಚಾರ, ಬಹಿರಂಗ ಶುದ್ದಯ ಪಂಚಾಚಾರ, ಅಂತರಂಗಶುದ್ದಿಯ ಸಪ್ತಾಚಾರ, ಅರಿವಿನ ಮೂಲಕ ಅರಿತು ಅನುಭವ ಮಂಟಪದಲ್ಲಿ ಚರ್ಚಿಸಿ ಅಳವಡಿಸಿಕೊಂಡರು. ಜ್ಞಾನವೆಂಬ ಗುರುವಿನ, ಧರ್ಮವೆಂಬ ಲಿಂಗದ ಮತ್ತು ಸಮಾಜವೆಂಬ ಜಂಗಮದ ಸೇವೇ ಮಾಡುವುದೇ ಕ್ರಿಯಾಚಾರ, ವಚನಗಳನ್ನು ಅರಿತು ಆಚರಿಸುವುದು ಜ್ಞಾನಾಚಾರ, ಕ್ರಾಮ, ಕ್ರೋಧ, ಮದ, ಮತ್ಸರ, ಲೋಭ ಮತ್ತು ಮೋಹಗಳಿಂದ ದೂರಾಗಿ ಬದುಕುವುದು ಭಾವಾಚಾರ. ನುಡಿದಂತೆ ನಡೆವುದು ಸತ್ಯಾಚಾರ. ಪಾಲಿಗೆ ಬಂದುದು ಪಂಚಾಮೃತ ಎಂದು ಬದುಕುವುದು ನಿತ್ಯಾಚಾರ, ಭಕ್ತಿಭಾವ ತಾಳುವುದು ಧರ್ಮಾಚಾರ, ಷಟ್ ಸ್ಥಲ ಮಾರ್ಗದಲ್ಲಿ ನಡೆವುದು ಸರ್ವಾಚಾರ. ಅಂದೂ ಇಂದೂ ಇರುವ ವರ್ಗಬೇಧ, ವರ್ಣಭೇದ, ಲಿಂಗಭೇದ ಮತ್ತು ಕಾಯಕಭೇದ ನಿವಾರಿಸಲು ಪ್ರತಿಯೊಬ್ಬರೂ ಅರಿವು ಆಚಾರದ ಬದುಕು ಸಾಧಿಸಲು ಮಹಾ ಮನೆ, ಅರಿವಿನ ಮನೆ, ಅನುಭವ ಮಂಟಪಗಳ ಸೃಷ್ಟಿಸಿದರು. ವಿಶ್ವದಲ್ಲಿ ಈ ರೀತಿಯ ಚಿಂತನೆಗಳೇ ಇಲ್ಲದಿದ್ದಾಗ ಇವುಗಳನ್ನು ಸೃಷ್ಟಿಸಿ ಇಂದಿನ ಪ್ರಜಾಪ್ರಭುತ್ವಕ್ಕೆ ಭದ್ರ ಬುನಾದಿ ಹಾಕಿದರು. ಯುದ್ಧರಾಹಿತ್ಯ ಪ್ರಪಂಚ ನಿರ್ಮಿಸುವ ಮಹತ್ವಾಕಾಂಕ್ಷೆಗೆ, ವಿಶ್ವಸಂಸ್ಥೆಗಳ ರೀತಿ–ನೀತಿಗಳಿಗೆ ಅಂದೇ ಅರಿವಿನ ಭದ್ರ ಬುನಾದಿ ಹಾಕಿದರು. ಇವುಗಳ ಅನುಸರಣೆಗಾಗಿ ಶರಣರೆಲ್ಲರೂ ಕಾಯಕ, ವಚನ, ಇಷ್ಟಲಿಂಗವೆಂಬ ತ್ರಿಮುಖ ಬಸವಧರ್ಮ ಅಳವಡಿಸಿಕೊಂಡರು. ಕಾಯಕದ ಕಷ್ಟದಲ್ಲಿ ಕೈಲಾಸವೆಂಬ ಆಚರಣೆಯಿದೆ; ಹಲವರು ದುಡಿದು ಕೆಲವರು ಕೂತು ತಿನ್ನುವ ಸಂಪ್ರದಾಯ ನಿರಾಕರಿಸಿ ಕಾಯಕ, ಪ್ರಸಾದ, ದಾಸೋಹತತ್ವ ಶರಣರು ಆಚರಿಸುತ್ತಾ ಬಂದರು. ಕಾಯಕವೆಂದರೆ ಸ್ಪರ್ಧೆ, ಹೋಲಿಕೆಗಳಿಲ್ಲದೆ, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತಾ ಬದುಕನ್ನು ಹೆಚ್ಚು ಹೆಚ್ಚು ಸುಂದರಗೊಳಿಸುವುದು. ನಮ್ಮ ಆಹಾರ ಬಟ್ಟೆ, ಮತ್ತಿತರ ಉತ್ಪಾದನಾ ವ್ಯವಸ್ಥೆ ಜೀವಜಾಲದಲ್ಲಿದೆ, ನಾವು ಅಸಮತೋಲನ ಸಮಸ್ಯೆ ಉಂಟು ಮಾಡಿ ಪರಿಸರ ಮಾಲಿನ್ಯವನ್ನುಂಟು ಮಾಡಬಾರದು. ಸರಳ, ಶ್ರಮಯುತ ಜೀವನ ನಡೆಸುತ್ತಾ ನದಿ, ಸಮುದ್ರ,ಖನಿಜ ಇತ್ಯಾದಿ ನೈಸರ್ಗಿಕ ಸಂಪನ್ಮೂಲಗಳು ವಿನಾಶದ ಅಂಚಿಗೆ ತಲುಪಿ ಮುಂದಿನ ಪೀಳಿಗೆಗೆ ಇಲ್ಲದಂತಾಗಬಾರದೆಂಬ ಎಚ್ಚರಿಕೆಯ ಉತ್ಪಾದನೆ ಮಾಡಬೇಕು. ಸತ್ಯಶುದ್ಧವಾಗಿಯೇ ಕಾಯಕ ಮಾಡಬೇಕೇ ವಿನಃ ಈಗಿನ ದ್ರವ್ಯಾರ್ಜನೆಯೇ ವ್ಯಾಪಾರದ ಉದ್ದೇಶ ಎನ್ನುವಂತಾಗಬಾರದೆಂಬ ಸ್ಪಷ್ಟ ಸಂದೇಶವಿತ್ತು.

12ನೇ ಶತಮಾನದಲ್ಲಿ ಜಗತ್ತೂ ಭೇದಗಳಿಂದ ವಿಭಜನೆ, ಪ್ರತ್ಯೇಕವಾದ ಪರಿಸರ, ಸವಾಲುಗಳು, ಭಯೋತ್ಪಾದನೆ, ನೀರು, ನಾರಿಯರ ಸಂರಕ್ಷಣೆಯಲ್ಲಿ ವೈಫಲ್ಯ, ಕೊಲೆ ಸುಲಿಗೆ ಪರಿಹರಿಸಲಾಗಿಲ್ಲ, ಈ ಸವಾಲುಗಳಿಗೆ ಸಮರ್ಪಕ ಉತ್ತರ ವಚನಗಳ ನಿಸ್ಸೀಮ ಆಚರಣೆಯಲ್ಲಿ ತೋರಿಸಬೇಕೇ ವಿನಃ ಬರೀ ಲಿಂಗ ಪೂಜಿಸಿ ಕುಳಿತರ ಪ್ರಯೋಜನವಿಲ್ಲ ಎನ್ನುತ್ತಾರೆ ಶರಣರು. ಜಾತಿ ಕುಲ,ಧರ್ಮದಿಂದ ಯಾರೂ ಮೇಲಾಗುವುದಿಲ್ಲ, ಯಾರೂ ಕೀಳಾಗುವುದಿಲ್ಲ ಎಂದು ವರ್ಣಭೇದ ನಿವಾರಿಸಿದರು. ನದಿಯಲ್ಲಿ ನದಿ ಕೂಡುವಂತಹ ಸಮಸುಖವೆಂದರೆ ಶ್ರೀಮಂತರು ಒಂದೇ ತೆರೆನಾದ ಬದುಕು, ಸುಖ ಕಷ್ಟ ಇರುತ್ತದೆ. ಈ ಭೂಮಿಯ ಮೇಲೆ ಯಾರಿಗೂ ತೊಂದರೆ ಕೊಡದೆ ದುಡಿದು ಸುಖವಾಗಿ ಬದುಕುವ ಹಕ್ಕು ಎಲ್ಲರಿಗೂ ಇದೆ. ಎಲ್ಲಾ ದೇಶಗಳ ಮಾನವರೂ ಧರ್ಮಗಳೂ ಸಕಲ ಜೀವಸಂಕುಲ ಒಟ್ಟಾಗಿ "ಇವ ನಮ್ಮವ ಇವ ನಮ್ಮವ, ಇವ ನಮ್ಮವನೆಂದೆಣಿಸಿ ಬದುಕಬೇಕು. ದಯೆಯೇ ಧರ್ಮದ ಮೂಲ ಮಂತ್ರ ಮಾಡಿಕೊಂಡು ಎಲ್ಲಾ ಸೀಮೆ ಉಲ್ಲಂಘಿಸಿ ಅಮೂಲ್ಯ ಸಂಗತಿಗಳನ್ನು ಶರಣರು ಬಾಳಿ ಬದುಕಿ ವಚನಗಳ ಮೂಲಕ ನಮಗೆ ಬಿಟ್ಟುಕೊಟ್ಟಿದ್ದಾರೆ. ಈ ನಿಸ್ಸೀಮ ತತ್ವಗಳ ಹಿಮಾಲಯವನ್ನು ನಾವು ಏರಿ ನೂರ್ಕಾಲ ಸರ್ವೋಪಕಾರಿಯಾಗಿ ಬಾಳೋಣವೇ?

ಹನ್ನರಡೆನೆಯ ಶತಮಾನದಲ್ಲಿ ಸಕಲ ಜೀವರಾಶಿಗೆ ಲೇಸನು ಬಯಸಿ ಕೈಕೊಂಡ ಶರಣರ ಸಮಾಜಕ್ರಾಂತಿ ವಿಶ್ವಕ್ಕೆ ಮಾದರಿಯಾದುದು. ಕಾಯಕದ ಮಹತ್ವ, ದಾನಧರ್ಮದ ಪರಿಪಾಲನೆ, ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ ಎಂಬ ಶ್ರೇಷ್ಠಭಾವನೆ, ಮೌಢ್ಯ ಮತ್ತು ಜಾತಿ ನಿರ್ಮೂಲನೆ ಸಂಕಲ್ಪ ಇಂತೆಲ್ಲ ಉಚ್ಚವಿಚಾರಗಳನ್ನು ಇರಿಸಿ ನುಡಿದಂತೆ ನಡೆದು ತೋರಿಸಿದ ಮಹಾನುಭಾವರು ಶರಣರಾಗಿದ್ದಾರೆ. 12ನೆ ಶತಮಾನದ ಶರಣಸಂಕುಲವೆಲ್ಲ ಸಾಮಾಜಿಕ, ಆರ್ಥಿಕ, ಜಾತಿ, ಲಿಂಗ ಮೊದಲಾದ ರಂಗಗಳಲ್ಲಾಗುತ್ತಿರುವ ಇಬ್ಬಗೆಯ ನೀತಿಯನ್ನು ಖಂಡಿಸಿ ಹೊಸಕ್ರಾಂತಿಗೆ ಹುಟ್ಟುಹಾಕಿದ್ದು ವಿಶ್ವಮಾನ್ಯವಾಗಿದೆ.

ದೇವರ ಸೃಷ್ಟಿಯಾದ ಪಂಚಭೂತಗಳಾದ ಭೂಮಿ, ಆಕಾಶ, ಅಗ್ನಿ, ಜಲ, ಗಾಳಿ–ಈ ಮೂಲವಸ್ತುಗಳು ಎಂದಾದರೂ ಯಾರಿಗಾದರೂ ತಾರತಮ್ಯ ಮಾಡಿದ್ದನ್ನು ಕಂಡಿರುವುದಿಲ್ಲ. ನಿಸರ್ಗವೇ ಸರ್ವಸಮಾನತೆ ತೋರಿದಾಗ ಹುಲು–ಮಾನವನು ತನ್ನಲ್ಲಿ ಭೇದಭಾವದ, ಅನೇಕ ಬೇಲಿ, ಗೋಡೆಗಳನ್ನು ಕಟ್ಟಿ ಮನುಷ್ಯತ್ವವವನ್ನು ಮರೆತಿದ್ದು ಖಂಡನೀಯವಾದುದು. ಇದಕ್ಕಲ್ಲವೇ ಶರಣರು ಸರ್ವಸಮಾನತೆಯ ನೂತನ ಸಮಾಜದ ನಿರ್ಮಾಣಕ್ಕೆ ಕಟಿಬದ್ಧರಾಗಿದ್ದು, ಅಧರ್ಮದ ದಾರಿಯನ್ನು ತುಳಿದಾತ ಆತನ ಬದುಕು ಸುಗಮವಾಗಲಾರದು. ನೆಮ್ಮದಿ ಇಲ್ಲದ ಬಾಳು ಬವಣೆಗೆ ಈಡಾಗುತ್ತದೆ. ಯಾವ ಪೂಜೆ, ಅಭಿಷೇಕ ಮಾಡಿದರೂ, ಕಾಶಿ, ರಾಮೇಶ್ವರಕ್ಕೆ ಹೋದರೂ ಆತನ ಮನಸ್ಸು ಕ್ಷೋಭೆಗೆ ಒಳಪಡುತ್ತದೆ. ದೇಹವನ್ನೇ ದೇಗುಲವನ್ನಾಗಿರಿಸಿ ಅಂತರಂಗ ಶುದ್ಧಿಯಲ್ಲಿ ಕಾಯಕ ಯೋಗಿಯಾಗಿ ಬದುಕನ್ನು ಸಾರ್ಥಕಗೊಳಿಸಲು ಶರಣರು ಕರೆ ನೀಡಿರುತ್ತಾರೆ.

**ಪರಾಮರ್ಶನ ಗ್ರಂಥಗಳು**


- ಹಿರೇಮಠ. ಎಂ ಎಸ್. (2003). ಶರಣರು ನೀಡಿದ ಬೆಳಕು.
- ರಂಜಾನ್ ದರ್ಗಾ. *ಬಸವಣ್ಣನ ವಚನಗಳಲ್ಲಿ ವಿಶ್ವಮಾನವ ಸಂದೇಶ*

- ತಿಪ್ಪೇರುದ್ರಸ್ವಾಮಿ, ಎಚ್. (1978). *ಶರಣರ ಅನುಭಾವ ಸಾಹಿತ್ಯ;* ಡಿ..ವಿ.ಕೆ ಮೂರ್ತಿ ಕೃಷ್ಣಮೂರ್ತಿ ಪುರಂ ಮೈಸೂರು–4.
- ಶರಣಪ್ಪ .ಎಸ್. ಮಾಳಗಿ. (2010). *ಬಸವಪೂರ್ವ ಶರಣರ ಆಂದೋಲನ:*
- ನಿಡುಮಾಮಿಡಿ ಚೆನ್ನಬಸವ ದೇಶೀಕೇಂದ್ರ ಶಿವಾಚಾರ್ಯ (1962). *ಕಾಯಕ ಕಲೆ.* ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ.
- ಕುಂದಣಗಾರ, ಕೆ.ಜಿ. (1937). *ಮಹಾದೇವಿಯಕ್ಕ.* ಬಸವನಬಳಗ ಚಿತ್ರದುರ್ಗಮಠ.
- ಕೊಟ್ಟೂರಸ್ವಾಮೀಜಿ. (1976). *ಉರ್ಫ್: ಶರಣ ಸಂದೇಶ.* ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ ಮೂರುಸಾವಿರ ಮಠ.
- ಶಿವಪ್ಪ, ಕೆ.ಸಿ. (ಸಂ) (2003). *ವಿಶ್ವ ದರ್ಶನ ಸಂಪುಟ 2;* ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ